ಅದನ್ನು ಅತೀ ಮುಖ್ಯವಾಗಿ ಮಾಡಬೇಕೆಂದು ಹೇಳುತ್ತೇನೆ. ಇಲ್ಲದಿದ್ದರೆ ಇವತ್ತಿನಿಂದ ಮುಂದುವರೆದರೆ ಬೆಂಗಳೂರು ನಗರದಲ್ಲಿ ದೊಡ್ಡ ಗಂಭೀರವಾದಂಥ ಪರಿಸ್ಥಿತಿ ಉದ್ಭವವಾಗುತ್ತದೆ ಎನ್ನತಕ್ಕಂಥ ಎಚ್ಚರಿಕೆಯನ್ನು ನಾನು ಸರ್ಕಾರಕ್ಕೆ ಕೊಡುತ್ತಿದ್ದೇನೆ.

ಶ್ರೀ ಎಂ. ಮೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯಾರವರು. ಮಾನ್ಯ ಚಿಕ್ಕೇಗೌಡರು ಮತ್ತು ಮಾನ್ಯ ವಾಟಾಳ್ ನಾಗರಾಜ್‌ರವರು ಈ ವಿಚಾರವನ್ನು ಎತ್ತಿದ್ದಾರೆ. ತಕ್ಷಣ ಇದರ ಬಗ್ಗೆ ನಾವು ವಿಚಾರವನ್ನು ಮಾಡಿ ಏನಾದರೂ ಅಲ್ಲಿ ಕೆಲಸ ನಡೆಯುತ್ತಿದ್ದರೆ ಅದನ್ನು ನಿಲ್ಲಿಸುತ್ತೇನೆ. ನಾಳೆ ಏನು ಕಾಲಿಂಗ್ ಅಟೆನ್‌ಷನ್ ಬರುತ್ತದೆ, ಅದಕ್ಕೆ ನಾವು ಉತ್ತರವನ್ನು ಒದಗಿಸುತ್ತೇನೆ.

3. ಲೋಕಾಯುಕ್ತರ ಬಲೆಗೆ ಬಿದ್ದ ಐ.ಎ.ಎಸ್. ಅಧಿಕಾರಿಗಳ ಚರ ಮತ್ತು ಸ್ಥಿರ ಆಸ್ತಿಗಳ ವಿವರ

ಶ್ರೀ ಎಂ.ವಿ. ವೆಂಕಟಪ್ಪ : ಮಾನ್ಯ ಅಧ್ಯಕ್ಷರೇ, ಕೆಲವು ಪ್ರಶ್ನೆಗಳಿಗೆ ಉತ್ತರ ವಿಧಾನಸೌಧದಲ್ಲಿಯೇ ಇದ್ದರೂ ಕೂಡಾ ಕಳುಹಿಸುತ್ತಿಲ್ಲ. ಉದಾಹರಣೆಗೆ ಲೋಕಾಯುಕ್ತರ ಬಲೆಗೆ ಬಿದ್ದ ಐ.ಎ.ಎಸ್. ಅಫೀಸರ್‌ಗಳ ಚರ ಮತ್ತು ಸ್ಥಿರ ಆಸ್ತಿ ಎಷ್ಟು ಎಂದು ಕೇಳಿದ್ದೆ. ಹೋದ ಸಾರಿಯೂ ಕೇಳಿದ್ದೆ. ಈ ಸಲವೂ ಕೇಳಿದ್ದೆ. ಅದು ಅನ್ - ಸ್ಟಾರ್ಡ್ ಕ್ವಶ್ಚನ್ ಆಗಿ ಮೂರನೇ ಪಟ್ಟಿಯಲ್ಲಿ ಪ್ರಿಂಟ್ ಆಗಿದೆ. ಉತ್ತರವನ್ನು ಸ್ಟೆನ್ಸಿಲ್‌ನಲ್ಲಿ ಕೊಡುತ್ತಾರಲ್ಲಾ, ಅದರಲ್ಲಿ ಉತ್ತರ ಇಲ್ಲ. ದಯವಿಟ್ಟು ಅದಕ್ಕೆ ಉತ್ತರವನ್ನು ಒದಗಿಸಿಕೊಡಬೇಕು.

ಒಬ್ಬ ಮಾನ್ಯ ಸದಸ್ಯರು : ಐ.ಎ.ಎಸ್. ಮತ್ತು ಐ.ಪಿ.ಎಸ್. ಆಫೀಸರ್ಸ್ ಬಗ್ಗೆ ಸರ್ಕಾರ ಯಾರದ್ದೂ ವಿವರ ಕೊಡುವುದಿಲ್ಲ.

ಶ್ರೀ ಸಿ. ಬೈರೇಗೌಡ : ಈ ಪ್ರಶ್ನೆಯನ್ನು ನಾನು ಕೂಡಾ ಕೇಳಿದ್ದೆ. ಇವತ್ತಿನವರೆಗೂ ಉತ್ತರ ಬಂದಿಲ್ಲ. ಇದನ್ನು ತಮ್ಮ ಗಮನಕ್ಕೆ ತರಬೇಕಾಗಿರತಕ್ಕಂಥದ್ದು ಏನೆಂದರೆ ಈ ಸದನವನ್ನು ಇಲ್ಲಿ ಇರತಕ್ಕಂಥ ಐ.ಎ.ಎಸ್. ಅಧಿಕಾರಿಗಳು ಅದನ್ನು ಏನಾದರೂ ಕಂಟ್ರೋಲ್ ಮಾಡುತ್ತಿದ್ದಾರೆಯೋ ಅಥವಾ ಇಲ್ಲಿ ಇರತಕ್ಕಂಥ ಸದಸ್ಯರು ಮತ್ತು ನಾವೇ ಮಾಡಿಕೊಂಡಿರತಕ್ಕಂಥ ಒಂದು ನಿಯಮಾವಳಿಗಳು ಏನು ಇವೆ. ಅದರ ಪ್ರಕಾರ ಈ ಸದನವನ್ನು ಕಂಟ್ರೋಲ್ ಮಾಡುವವರು. ಯಾರು ಎನ್ನತಕ್ಕಂಥದ್ದು ನಿರ್ಧಾರವಾಗಬೇಕು. ಮತ್ತು ಅಧ್ಯಕ್ಷರು : ಸದನವನ್ನು ಕಂಟ್ರೋಲ್ ಮಾಡುವವನು ನಾನು.

ಶ್ರೀ ಸಿ. ಬೈರೇಗೌಡ : ಹೌದು.

MR. SPEAKER : I Will not allow any IAS officer to have any say over this.

ಶ್ರೀ ಸಿ. ಬೈರೇಗೌಡ : ತಾವು ಅದನ್ನು ಸರಿಪಡಿಸಿದ್ದರೆ ತಮಗೆ ಧನ್ಯವಾದಗಳು ಆದರೆ ಇವತ್ತು ಪರಿಸ್ಥಿತಿ ಏನಾಗುತ್ತಿದೆ ಅಂದರೆ ಅವರು ಉತ್ತರ ಕೊಡುವುದೇ ಇಲ್ಲ. ಈ ಪ್ರಶ್ನೆಯನ್ನು ನಾನು ಕೂಡ ಕೇಳಿದ್ದೆ. ಇದು.....

MR. SPEAKER : Mr. Parliamentary Affairs Minster, this is a matter which needs your urgent attention. Some of these questions, you know, I have had occasions to make a mention about this. On the face of it the questions which seem to be embarrassing or which seem to be inconvernient, answers are not readily available. Now, for example, that particular question of Hon. Member M.V.Venkatappa about I.A.S. Officers against whom raids

have taken place and he has asked about their Sthira and 'chara' property or whatever it is. Why does not the Government make a little extra effort to get answers for theses questions? Why does the Government want to take upon itself unnecessary blame? please exert yourself and see that these questions are answered will in time.

SRI C. BYREGOWDA : I have to make one observation about the Government. The Government it self is shielding such Corrupt officers.

MR. SPEAKER : I don't think you should make such sweeping allegations.

4. ಸರ್ಕಾರಿ ನೌಕರರು ಪ್ರತಿ ವರ್ಷ ಅವರ ಆಸ್ತಿಯನ್ನು ಘೋಷಣೆ ಮಾಡುವುದು.

ಪ್ರೊ. ಎಂ.ಡಿ. ನಂಜುಂಡಸ್ವಾಮಿ : ಮಾನ್ಯ ವೆಂಕಟಪ್ಪನವರು ಚರ ಮತ್ತು ಸ್ಥಿರ ಆಸ್ತಿ ವಿವರಣೆಯನ್ನು ತಿಳಿದುಕೊಳ್ಳುವಂತಹ ಪ್ರಶ್ನೆಯನ್ನು ಕೇಳಿದ್ದಾರೆ. ಅದಕ್ಕೆ ಉತ್ತರ ಬಂದಿಲ್ಲ. ಈ ಸನದಕ್ಕೆ ಬಂದಾಗಿನಿಂದಲೂ ಇದಕ್ಕೆ ಸಂಬಂಧಪಟ್ಟ ಹಾಗೆ ಮತ್ತೊಂದು ಪ್ರಶ್ನೆಯನ್ನು ಕೇಳಿದ್ದೇನೆ. ಈಗಿರುವ ಕಾನೂನು ಪ್ರಕಾರ ಎಲ್ಲ ಸರ್ಕಾರಿ ನೌಕರರು ಪ್ರತಿ ವರ್ಷ ಅವರ ಅಸೆಟ್ಸ್ ಅನು ಡಿಕ್ಲೇರ್ ಮಾಡಿಕೊಳ್ಳಬೇಕೆನ್ನುವ ಒಂದು ನಿಯಮ ಇದೆ. ಆದರೆ ನನಗೆ ಬಂದಿರುವ ಮಾಹಿತಿಯ ಪ್ರಕಾರ ಇತ್ತೀಚಿನ ವರ್ಷಗಳಲ್ಲಿ ಯಾರು ಮಾಡಿಲ್ಲ.

ಸರ್ಕಾರಿ ನೌಕರರು ಆಸ್ತಿ ಘೋಷಣೆ ಮಾಡಿಕೊಳ್ಳುತ್ತಾ ಇದ್ದಾರಾ ಎಂದು ಕೇಳಿದ್ದೆ ಮಾಡುತ್ತಿದ್ದರೆ ಯಾವ ವಿಧಾನದಲ್ಲಿ ಮಾಡುತ್ತಿದ್ದಾರೆ, ಪ್ರಮಾಣ ಪತ್ರಿಕೆಯ ಮೂಲಕ ಮಾಡುತ್ತಿದ್ದಾರಾ ಎಂಬ ಪ್ರಶ್ನೆಯನ್ನು ಪ್ರತಿ ಸದನದ ಪ್ರಾರಂಭವಾಗುವ ಕಾಲಕ್ಕೆ ಕಳುಹಿಸುತ್ತಿದ್ದೇನೆ. ಅದಕ್ಕೂ ಉತ್ತರ ಸಿಕ್ಕಿಲ್ಲ. ಅದಕ್ಕೆ ಉತ್ತರ ಸಿಕ್ಕಿದ ಮೇಲೆ ಮಾನ್ಯ ವೆಂಕಟಪ್ಪನವರ ಪ್ರಶ್ನೆಗೆ ಉತ್ತರ ಸಿಗುತ್ತದೆಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಸದಸ್ಯರು ತಮ್ಮ ಪ್ರಶ್ನೆಯನ್ನು ಕಳುಹಿಸಿದಾಗ, ತಾವು ಅದನ್ನು ಸ್ವೀಕಾರ ಮಾಡಿದಾಗ ಅದಕ್ಕೆ ಉತ್ತರ ಕೊಡಬೇಕಾದುದು ನಮ್ಮ ಕರ್ತವ್ಯ. ಇದರ ಬಗ್ಗೆ ಭಿನ್ನಾಭಿಪ್ರಾಯವಿಲ್ಲ. ಕೆಲವು ಸಂದರ್ಭದಲ್ಲಿ ಕೆಲವು ಮಾಹಿತಿಯನ್ನು ಸಂಗ್ರಹ ಮಾಡಲಿಕ್ಕೆ ಕೆಲವು ಸಮಯ ಬೇಕಾಗಬಹುದು. ಅದರೂ ಕೂಡ ಸದನಕ್ಕೆ ಉತ್ತರ ಕೊಡಲೇಬೇಕಾಗುತ್ತದೆ. ಲೋಕಾಯುಕ್ತರವರಿಗೆ ರೈಡ್ ಆದ ಐ.ಎ.ಎಸ್. ಆಫೀಸರ್‌ಗಳ ಮಾಹಿತಿ ಕೇಳಿದ್ದೀರಿ ಮತ್ತು ಪ್ರೊ. ನಂಜುಂಡಸ್ವಾಮಿಯವರು ಸರ್ಕಾರಿ ನೌಕರರ ಆಸ್ತಿಪಾಸ್ತಿ ವಿಚಾರ ಕೇಳಿದ್ದಾರೆ. ಸರ್ಕಾರಿ ನೌಕರರು ತಮ್ಮ ಆಸ್ತಿ ಬಗ್ಗೆ ಡಿಕ್ಲೇರ್ ಮಾಡಬೇಕು. ಅದಕ್ಕೆ ಉತ್ತರ ಕೊಡುತ್ತೇನೆ. ಮಾನ್ಯ ಬೇರೇಗೌಡರಿಗೆ ಒಂದು ರೀತಿಯ ಇನ್‌ಫರೆನ್ಸ್ ಡ್ರಾ ಮಾಡತಕ್ಕ ಪ್ರವೃತ್ತಿ ಇದೆ. ಆ ಪ್ರವೃತ್ತಿ ಅಷ್ಟು ಸರಿಯಲ್ಲ.

SRI C. BYRE GOWDA : In the absence of the reply.....

MR. SPEAKER : I have said, sweeping allegations cannot be made.

ಶ್ರೀ ಎಂ.ವೀರಪ್ಪ ಮೊಯಿಲಿ : ತಮಗೆ ಉತ್ತರ ಬೇಕು. ಅದನ್ನು ಕೇಳುವುದು ನಿಮ್ಮ ಹಕ್ಕು. ಆ ನಿಮ್ಮ ಹಕ್ಕನ್ನು ಚ್ಯುತಿಗೊಳಿಸತಕ್ಕ ಪ್ರಯತ್ನ ನಾವು ಎಂದೂ ಮಾಡುವುದಿಲ್ಲ. ಆದರೆ ಉತ್ತರ ಕೊಡದೆ ಇದ್ದ ಕಾರಣದಿಂದ ಅದಕ್ಕೆ ಏನಾದರೂ